ಈ) ನಷ್ಟದ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ :

ವರ್ಷ	ನಷ್ಟ (ಲಕ್ಷ ರೂ. ಗಳಲ್ಲಿ)
೧೯೭೧–೭೨	೫೦.೮೦
೧೯೭೨–೭೩	೪೦.೪೮
೧೯೭೩–೭೪	೭೨.೫೯
೧೯೭೪–೭೫	೭೨.೦೦
೧೯೭೫–೭೬	೯೯.೯೩
೧೯೭೬–೭೭	೭೯.೯೧
೧೯೭೭–೭೮	೧೨೩.೦೬
೧೯೭೮–೭೯	೧೨೩.೪೨
೧೯೭೯–೮೦	೬೧.೭೦
೧೯೮೦–೮೧	೨೭೯.೧೪
೧೯೮೧–೮೨	೪೩೭.೬೭
೧೯೮೨–೮೩	೬೩೬.೯೬
	(ತಾತ್ಪೂರ್ವಿಕ)

ಉ) ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ :—

೧. ಪ್ರಯಾಣ ದರಗಳ ಪರಿಷ್ಕರಣೆ

೨. ನಗರ ಕಾರ್ಪೊರೇಷನ್, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಸರ್ಕಾರದ ಸಹಾಯಧನ.

೩. ವಾಹನ ಕಾರ್ಯಾಚರಣೆಯಲ್ಲಿ ಪ್ರಗತಿ

೪. ವೆಚ್ಚದಲ್ಲಿ ಕಡಿತ, ಆದಾಯವನ್ನು ಹೆಚ್ಚಿಸುವುದು ಮತ್ತು ಹಣ ಸೋರುವಿಕೆಯನ್ನು ತಡೆಗಟ್ಟುವುದು.

೫. ನಿಗದಿತ ಸಿಬ್ಬಂದಿ ವ್ಯವಸ್ಥೆಯನ್ನು ಕಂಡುಹಿಡಿದು ಸಿಬ್ಬಂದಿ ಪ್ರಮಾಣವನ್ನು ಕಮ್ಮಿ ಮಾಡುವುದು.

ಊ) ಇಂತಹ ಯಾವ ಪ್ರಸ್ತಾಪವೂ ಸದ್ಯಕ್ಕೆ ಸರಕಾರದ ಮುಂದೆ ಇಲ್ಲ.

ಋ) (ಊ) ಭಾಗಕ್ಕೆ ಕೊಟ್ಟಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೂಡ್ಲಗಿಯಲ್ಲಿ ನೂಲು ಬಿಚ್ಚುವ ಘಟಕವನ್ನು ಸ್ಥಾಪಿಸುವ ಬಗ್ಗೆ

೧೬೨೨ (೮೨) ಕೆ. ಚೆನ್ನಬಸವನಗೌಡ (ಕೂಡಲಗಿ).—ಮಾನ್ಯ ಸಮಾಜಕಲ್ಯಾಣ ಮತ್ತು ರೇಷ್ಮೆ ಖಾತೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ ?

ಕೂಡ್ಲಿಗಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ರೇಷ್ಮೆ ವ್ಯವಸಾಯ ಹೆಚ್ಚಾಗಿರುವುದರಿಂದ ಸರ್ಕಾರದವರು ಕೂಡ್ಲಗಿಯಲ್ಲಿ ನೂಲು ಬಿಚ್ಚುವ ಯಂತ್ರವನ್ನು ಸ್ಥಾಪಿಸುವರೆ ?

ಶ್ರೀಮತಿ ಚಂದ್ರಪ್ರಭಾ ಅರಸ್.—(ಸಮಾಜ ಕಲ್ಯಾಣ ಮತ್ತು ರೇಷ್ಮೆ ಮಂತ್ರಿಗಳು).—ಇಲ್ಲ.

ಆದರೂ ಬರಗಾಲ ಪೀಡಿತ ಪ್ರದೇಶಗಳ ಯೋಜನೆಯಲ್ಲಿ ೧೦ ಬೇಸಿನ್‌ಗಳ ಒಂದು ನೂಲು ಬಿಚ್ಚುವ ಘಟಕವನ್ನು ಬಳ್ಳಾರಿ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಿಂದ ಸ್ಥಾಪಿಸಲು ಉದ್ದೇಶಿಸಲಾಗಿದೆ.

(೧೧೬) ಶ್ರೀ ಎಂ. ಎಂ. ನಾಣಯ್ಯ (ಮಡಿಕೇರಿ).—ಮಾನ್ಯ ರಾಜ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೆ. ಎಸ್. ಆರ್. ಟಿ. ಸಿ. ಗೆ ಸೇರಿದ ಮಡಿಕೇರಿ ಡಿಪೋ ಹೊಂದಿರುವ ಮಾರ್ಗಗಳಿಷ್ಟು

ಅ) ಕೆ. ಎಸ್. ಆರ್. ಟಿ. ಸಿ. ಡಿಪೋ ಮಂಡಿಕೇರಿಗೆ ಒದಗಿಸಿರುವ ವಾಹನಗಳ ಸಂಖ್ಯೆ ಎಷ್ಟು ?

ಇ) ಕೆ. ಎಸ್. ಆರ್. ಟಿ. ಸಿ. ಯು ಮಂಡಿಕೇರಿ ಡಿಪೋವಿನಲ್ಲಿ ಉಪಯೋಗಿಸುತ್ತಿರುವ ವಾಹನಗಳ ಆಯುರ್ದಾಯವೆಷ್ಟು ?

ಈ) ಸದ್ಯದಲ್ಲಿ ಹಳೆಯ ವಾಹನಗಳನ್ನು ಬದಲಿಸಲು ಉದ್ದೇಶಿಸಲಾಗಿದೆಯೇ ?

ಉ) ಕೆ. ಎಸ್. ಆರ್. ಟಿ. ಸಿ. ಯು ಮಂಡಿಕೇರಿ ಡಿಪೋ ಲಾಭಗಳಿಸುತ್ತಿರುವುದು ನಿಜವೇ ಹಾಗಾದರೆ ಎಂದಿನಿಂದ ?

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು).—

ಅ) ೩೮ ಮಾರ್ಗಗಳು.

ಆ) ೫೯ ವಾಹನಗಳನ್ನು ಒದಗಿಸಲಾಗಿದೆ.

ಇ) ಮಂಡಿಕೇರಿ ಡಿಪೋವಿನ ವಾಹನಗಳ ಆಯುರ್ದಾಯ ಪಟ್ಟಿಯು ಈ ಕೆಳಕಂಡಂತಿದೆ.

ಉಪಯುಕ್ತ ಪರಿಮಿತಿ		ವಾಹನಗಳ ಸಂಖ್ಯೆ
೫೦,೦೦೦ ಕಿ. ಮೀ.ನ ಒಳಗೆ		೩
೫೦,೦೦೦	ದಿಂದ ೧,೦೦,೦೦೦	೧
೧,೦೦,೦೦೦	ದಿಂದ ೧,೫೦,೦೦೦	೨
೧,೫೦,೦೦೦	ದಿಂದ ೨,೦೦,೦೦೦	೧
೨,೦೦,೦೦೦	ದಿಂದ ೨,೫೦,೦೦೦	೪
೨,೫೦,೦೦೦	ದಿಂದ ೩,೦೦.೦೦೦	೪
೩,೦೦.೦೦೦	ದಿಂದ ೩,೫೦,೦೦೦	೮
೩,೫೦,೦೦೦	ದಿಂದ ೪,೦೦,೦೦೦	೨
೪,೦೦,೦೦೦	ದಿಂದ ೪,೫೦,೦೦೦	—
೪,೫೦,೦೦೦	ದಿಂದ ೫.೦೦,೦೦೦	೨
೫,೦೦,೦೦೦	ದಿಂದ ೫,೫೦,೦೦೦	೯
೫,೫೦,೦೦೦	ದಿಂದ ೬,೦೦,೦೦೦	೫
೬,೦೦,೦೦೦	ದಿಂದ ೬,೫೦,೦೦೦	೩
೬,೫೦,೦೦೦	ದಿಂದ ೭,೦೦,೦೦೦	೩
೭,೦೦,೦೦೦	ದಿಂದ ೭,೫೦,೦೦೦	೨
೭,೫೦,೦೦೦	ದಿಂದ ೮,೦೦,೦೦೦	೧
೮.೦೦,೦೦೦	ದಿಂದ ೮,೫೦,೦೦೦	೩
೮,೫೦,೦೦೦	ದಿಂದ ೯,೦೦,೦೦೦	೬
	ಒಟ್ಟು	೫೯

ಈ) ಹೌದು. ಹಳೆಯ ವಾಹನಗಳನ್ನು ಅವಶ್ಯಕತೆ ಇದ್ದಾಗಲೆಲ್ಲಾ ಬದಲಾಯಿಸಿ ಹೊಸ ವಾಹನಗಳನ್ನು ಒದಗಿಸಲಾಗುತ್ತದೆ.

ಉ) ಮಂಡಿಕೇರಿ ಡಿಪೋವು ಗಳಿಸಿರುವ ಲಾಭ ನಷ್ಟ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

ವರ್ಷ	ಲಾಭ (+) ನಷ್ಟ (—) (ರೂ. ಗಳಲ್ಲಿ)
೧೯೭೫–೭೬	+ ೧.೨೫
೧೯೭೬–೭೭	+ ೫.೨೮
೧೯೭೭–೭೮	— ೫.೪೬
೧೯೭೮–೭೯	+ ೦.೧೨
೧೯೭೯–೮೦	— ೬.೪೦
೧೯೮೦–೮೧	— ೧೦.೯೮
೧೯೮೧–೮೨	+ ೨.೩೬
೧೯೮೨–೮೩	— ೦.೨೨

ಪರಿಶಿಷ್ಟ ಜಾತಿಯವರಿಗಾಗಿ ಮಹಿಳಾ ಕಲ್ಯಾಣ ಕೇಂದ್ರಗಳು

೧೬೮ (೧೩೪) ಶ್ರೀ ಪಿ. ಪಿ. ಹೆಗರೆ (ಚಿಕ್ಕೋಡಿ).—ಮಾನ್ಯ ಸಮಾಜಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಳಗಾಂ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯವರಿಗಾಗಿ ೩೧–೩–೮೦ರ ವರೆಗೆ ಸರ್ಕಾರದಿಂದ ನಡೆಸಲಾಗುತ್ತಿದ್ದ ಒಟ್ಟು ಮಹಿಳಾ ಕಲ್ಯಾಣ ಕೇಂದ್ರಗಳು ಬಾಲವಾಡಿಗಳ ಸಂಖ್ಯೆ (ದಯವಿಟ್ಟು ತಾಲ್ಲೂಕುವಾರು ಮಾಹಿತಿ ಕೊಡಿ)

ಆ) ೧೯೮೦–೮೧, ೧೯೮೧–೮೨, ೧೯೮೨–೮೩ನೇ ಸಾಲಿನಲ್ಲಿ ಬೆಳಗಾಂ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯವರಿಗಾಗಿ ಪ್ರಾರಂಭಿಸಲಾದ ಮಹಿಳಾ ಕಲ್ಯಾಣ ಕೇಂದ್ರ ಬಾಲವಾಡಿಗಳೆಷ್ಟು ?

ಇ) ಪ್ರಸಕ್ತ ಸಾಲಿನಲ್ಲಿ ಅಂದರೆ ೧೯೮೩–೮೪ನೇ ಸಾಲಿನಲ್ಲಿ ಸರ್ಕಾರ ಪ್ರಾರಂಭಿಸಬೇಕೆಂದಿರುವ ಮಹಿಳಾ ಕಲ್ಯಾಣ ಕೇಂದ್ರಗಳ ಸಂಖ್ಯೆ ಎಷ್ಟು ?

ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜಕಲ್ಯಾಣ ಮಂತ್ರಿಗಳು).—

ಅ) ೩೦ (೩೧–೩–೧೯೮೦ ರಲ್ಲಿದಂತೆ) ವಿವರಗಳು ಕೆಳಕಂಡಂತಿವೆ.

೧	ರಾಯಬಾಗ್ ತಾಲ್ಲೂಕು	...	೪
೨	ಹುಕ್ಕೇರಿ ,,	...	೨
೩	ಬೆಳಗಾಂ ,,	...	೪
೪	ಖಾನಾಪುರ ,,	...	೨
೫	ಬೈಲಹೊಂಗಲ ,,	...	೩
೬	ಚಿಕ್ಕೋಡಿ ,,	...	೫
೭	ನಿಪ್ಪಾಣಿ ,,	...	೧
೮	ರಾಮದುರ್ಗ ,,	...	೨
೯	ಅಥಣಿ ,,	...	೪
೧೦	ಗೋಕಾಕ್ ,,	...	೩